## ಮನಸೆಳೆದಳು 'ರಾಣಿ'

ಸ್ಟಾರ್ ಸುವರ್ಣದಲ್ಲಿ 'ರಾಣಿ' ಹೊಸ ಧಾರಾವಾಹಿ ಪ್ರಾರಂಭವಾಗಿದೆ. ಆರಂಭ ಚೆನ್ನಾಗಿದೆ, ನೋಡುತ್ತಿದ್ದ ನಮಗೆ ಸಂತೋಷ ಆಯಿತು. ನಾಯಕಿಯ ಗಂಭೀರ ಮಾತು, ಅವಳ ಧೈರ್ಯ–ಸಾಹಸ ನೋಡಿ ಮೆಚ್ಚುಗೆ ಆಯಿತು. ಅಂತಹ ಧೀರೆಗೆ ಒಬ್ಬ ಶ್ರೀಮಂತ ಯುವಕ ಮನಸೋತು ಅವರ ಮನೆಯಲ್ಲಿಯೇ ಬಾಡಿಗೆ ಹಿಡಿದು ಇರುತ್ತಾನೆ. ಕಥೆಯನ್ನು ಸ್ವಾರಸ್ಯಕರವಾಗಿ ಹೆಣೆಯಲಾಗಿದೆ. ಹಳ್ಳಿಯ ಬದುಕು ಮತ್ತು ಪರಿಸರವನ್ನು ಪರಿಚಯಿಸುವ ಪ್ರಯತ್ನ ಶ್ಲಾಘನೀಯ. ದಿನವೂ ಅರ್ಧ ಗಂಟೆ ಹೇಗೆ ಹೋಗುತ್ತೆ ಅನ್ನುವುದೇ ಗೊತ್ತಾಗುವುದಿಲ್ಲ. ಇದೇ ಕುತೂಹಲವನ್ನು ಕಾಯ್ದುಕೊಳ್ಳುವುದು ಒಳ್ಳೆಯದು.

—ಬಿ.ಎಸ್. ಮುಳ್ಳೂರ, ಹಲಗತ್ತಿ



## ಸೂಪರ್ ಸ್ಟಾರ್‌ಗೆ ಹಳ್ಳಿ ಸೊಗಡಿರಲಿ

ಸ್ಟಾರ್ ಸುವರ್ಣದಲ್ಲಿ 'ಸೂಪರ್ ಸ್ಟಾರ್' ಮಹಿಳೆಯರಿಗಾಗಿ ಇರುವ ಕಾರ್ಯಕ್ರಮ. ಸಾಧಕಿಯರು, ಸಂಕಷ್ಟದಲ್ಲಿ ಬದುಕನ್ನು ಎದುರಿಸಿದವರನ್ನು ಇಲ್ಲಿ ಮಾದರಿ ಎನ್ನುವಂತೆ ಪರಿಚಯಿಸಲಾಗುತ್ತಿದೆ. ಆದರೆ, ಈ ಕಾರ್ಯಕ್ರಮದಲ್ಲಿ ಕೆಲವು ವಿಷಯ ಪುನರಾವರ್ತನೆ ಆಗುತ್ತಿದೆ. ಪಟ್ಟಣದ ಮಹಿಳೆಯರಿಗೆ ಕಾರ್ಯಕ್ರಮ ಮೀಸಲಾದಂತಿದೆ. ಗ್ರಾಮೀಣ ಪ್ರದೇಶದ ಮಹಿಳೆಯರಿಗೂ ಆದ್ಯತೆ ನೀಡುವುದು ಮುಖ್ಯ. ಆ ಮೂಲಕ ಗ್ರಾಮೀಣ ಪ್ರದೇಶದ ಚಿತ್ರಣವನ್ನೂ ಕಟ್ಟಿಕೊಡಬಹುದು.

—ಎಂ.ಎಸ್. ಉಷಾ ಪ್ರಕಾಶ್, ಮೈಸೂರು

## ಸಹಬಾಳ್ವೆಯ ಸಂದೇಶದ ಶಿಲ್ಪಕಲೆ

ಚಂದನ ವಾಹಿನಿಯಲ್ಲಿ ಇತ್ತೀಚೆಗೆ ತ್ರಿಕೂಟೇಶ್ವರ ದೇವಾಲಯದ ಶಿಲ್ಪ ವೈಭವವನ್ನು



ಪರಿಚಯಿಸಲಾಯಿತು. ಗದಗದಲ್ಲಿರುವ ಈ ದೇವಾಲಯದ ನವರಂಗ 42 ಕಂಬಗಳಿಂದ ಕೂಡಿದೆ. ಈ ಕಂಬಗಳ ಕೆತ್ತನೆಯ ವೈವಿಧ್ಯ ಕಣ್ಮನ ಸೆಳೆಯಿತು. ದೇವಾಲಯದ ಹೊರಭಾಗದಲ್ಲಿನ ಕೆತ್ತನೆಯಲ್ಲಿ ವಿವಿಧ ಧರ್ಮಗಳ ಸಹಬಾಳ್ವೆಯ ಸಂಕೇತಕ್ಕೆ ಒತ್ತು ನೀಡಿರುವ ಅಂಶ ಸ್ಪಷ್ಟವಾಗಿತ್ತು.

ದೇವಾಲಯದ ಶಿಲ್ಪಕಲಾ ವೈಭವವನ್ನು ವಾಹಿನಿ ಮನಸ್ಸಿಗೆ ಹಿತಕರ ಎನಿಸುವ ಹಿನ್ನೆಲೆಯ ಧ್ವನಿಯಲ್ಲಿ ನಿರೂಪಿಸಿತು. ಸಂದರ್ಭಕ್ಕೆ ಒಳ್ಳೆಯ ಹಿನ್ನೆಲೆ ಸಂಗೀತ ಶಿಲ್ಪಕಲಾ ದೃಶ್ಯವನ್ನು ಕಾವ್ಯದಂತೆ ಪ್ರಸ್ತುತಪಡಿಸಿತು. ಈ ರೀತಿಯ ಕಾರ್ಯಕ್ರಮಗಳು ಹೆಚ್ಚು ಹೆಚ್ಚು ಪ್ರಸಾರವಾಗಲಿ.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ

ವಾರದ ಪತ್ರ

## ಸಾಧಕರ ಪೀಠಕ್ಕೆ...

ಝೀ ಕನ್ನಡದ 'ವೀಕೆಂಡ್ ವಿತ್ ರಮೇಶ್' ಅದ್ಭುತವಾಗಿ ಮೂಡಿಬರುತ್ತಿದೆ. ಅತಿಥಿಗಳ ಬಗ್ಗೆ ಅಲ್ಲಲ್ಲಿ ಅಪಸ್ವರ ಕೇಳಿಯೂ ಬಂದಿದೆ.

ಈ ವೇದಿಕೆಯಲ್ಲಿ ಇನ್ನೂ ಅನೇಕ ಸಾಧಕರನ್ನು ಪರಿಚಯಿಸಬಹುದು ಎನ್ನುವುದು ನನ್ನ ಭಾವನೆ. ಉದಾಹರಣೆಗೆ ಆಧ್ಯಾತ್ಮಿಕ ಚಿಂತಕ ಕೊಪ್ಪಳದ ಗವಿಸಿದ್ದೇಶ್ವರ ಸ್ವಾಮೀಜಿ, ಸುಮಾರು 2000ಕ್ಕೂ ಹೆಚ್ಚು ಯಕ್ಷಗಾನಗಳಿಗೆ ಭಾಗವತಿಕೆ ನೀಡಿರುವ ಕಾವ್ಯಶ್ರೀ ಅಜೇಕಾರು, ಕ್ರಿಕೆಟಿಗರಾದ ಜಿ.ಆರ್. ವಿಶ್ವನಾಥ್, ಅನಿಲ್ ಕುಂಬ್ಳೆ, ಯೂಟ್ಯೂಬರ್ ಡಾ.ಬ್ರೋ, ನಟಿ ಆರತಿ, ನಾಟಕವನ್ನೇ ಉಸಿರಾಗಿಸಿಕೊಂಡ ರಂಗಕರ್ಮಿ ರಮೇಶ್, ನಟ ರಿಷಭ್ ಶೆಟ್ಟಿ, ಲಯನ್ ಜಯರಾಜ್ ಅವರ ಸಾಧನೆಯ ಹಾದಿಯನ್ನು ತಿಳಿದುಕೊಳ್ಳುವ ಕುತೂಹಲವಿದೆ.

—ಕೆ. ಶ್ರೀನಿವಾಸರಾವ್, ಹರಪನಹಳ್ಳಿ

## ಶೋಭೆ ತರದ ಮಾತು ಬೇಡ

ಝೀ ಕನ್ನಡದ 'ಶ್ರೀರಸ್ತು ಶುಭಮಸ್ತು' ಅನೇಕ ಸಕಾರಾತ್ಮಕ ಅಂಶಗಳನ್ನು ಒಳಗೊಂಡ ಅಪರೂಪದ ಧಾರಾವಾಹಿ. ಸುಧಾರಾಣಿ, ವೆಂಕಟ್ ರಾವ್, ಅಜಿತ್ ಹಂದೆ ಅವರ ಅಭಿನಯ ನಮ್ಮ ಸುತ್ತಮುತ್ತಲಿನ ಅನೇಕರ ಪ್ರತಿಬಿಂಬದಂತೆ ಕಾಣಿಸುತ್ತಾರೆ.

ಮಾಧವ ಮತ್ತು ತುಳಸಿ ಪರಸ್ಪರ ಧೈರ್ಯವನ್ನು ತುಂಬುವ ಮಾತುಗಳನ್ನು ಆಡುತ್ತಾರೆ. ಅಪಾರ ವಾತ್ಸಲ್ಯ, ಮಮತೆ ಇರುವ ಕಡೆ ಪ್ರೀತಿಯ ಟೀಕೆಯೂ ಇರುತ್ತದೆ ಎನ್ನುವುದಕ್ಕೆ ದತ್ತಣ್ಣ ಸೊಸೆಯನ್ನು ಆಗಾಗ ಮೂದಲಿಸುವ ನಟನೆ ಚೆನ್ನಾಗಿ ಮೂಡಿಬಂದಿದೆ. ಎಲ್ಲ ಸಂದರ್ಭದಲ್ಲೂ ಆಯಾ ಪಾತ್ರಗಳ ಹೆಸರಿನ ಬದಲು ಅಡ್ಡ ಹೆಸರು ಕರೆಯುವುದು ಯಾಕೋ ಸರಿ ಅನ್ನಿಸುವುದಿಲ್ಲ. ಸಿರಿ, ಸಮರ್ಥ, ಮಾಧವ ಇವರನ್ನು ಸೋಗಲಾಡಿ, ದಂಡ ಪಿಂಡ, ಚಪ್ಪಲಿ ಕಳ್ಳ ಎಂದು ಯಾವಾಗ್ಲೂ ಕರೆಯುವುದು ಕಿರಿ ಕಿರಿ ಅನ್ನಿಸುತ್ತದೆ.

—ಎಸ್. ನಂದಿನಿ, ಬೆಂಗಳೂರು

## ಉಲ್ಟಾ ಪಲ್ಟಾ

ಟೀವಿಯಲ್ಲಿ  
ಆಗ  
ಕ್ರಿಕೆಟ್  
ಕ್ರಿಕೆಟ್  
ಕ್ರಿಕೆಟ್!

ಈಗ  
ಟಿಕೆಟ್  
ಟಿಕೆಟ್  
ಟಿಕೆಟ್!

ಕ್ರಿಕೆಟ್‌ಗೊಂದು ಕಾಲ  
ಟಿಕೆಟ್‌ಗೊಂದು ಕಾಲ!  
ಕಾಲಾಯ ತಸ್ಮೈ ನಮಃ

—ಪಿ.ಜೆ. ರಾಘವೇಂದ್ರ, ಮೈಸೂರು

## ಏನಿದು ವಿಚಿತ್ರ ಲೆಕ್ಕಾಚಾರ?

'ಶ್ರೀರಸ್ತು ಶುಭಮಸ್ತು' ಧಾರಾವಾಹಿಯಲ್ಲಿ ಮಾಧವ ತನ್ನ ಕೆಫೆಯನ್ನು ಉಳಿಸಿಕೊಳ್ಳಬೇಕಾದರೆ ಒಂದೇ ದಿನ ಮೂರು ಲಕ್ಷ ವ್ಯವಹಾರ ಮಾಡಿ ತೋರಿಸಬೇಕು ಎಂಬುದು ಸವಾಲು. ಕುತಂತ್ರದಿಂದ ಉದ್ಯೋಗಿಗಳು ಕೈಕೊಟ್ಟರೂ ಆತ್ಮೀಯರು ಬಂದು ಮಾಧವನಿಗೆ ನೆರವಾಗುವ ಭಾವನಾತ್ಮಕ ದೃಶ್ಯಗಳಿದ್ದವು. ಆದರೆ ಅಲ್ಲಿನ ಲೆಕ್ಕಾಚಾರಗಳು ವಿಚಿತ್ರವಾಗಿದ್ದವು.

ದಿನಾ ಲಕ್ಷ ರೂಪಾಯಿ ವ್ಯವಹಾರ ಮಾಡಿ ಮ್ಯಾಗಿಗೆ ಆ ದಿನ ಮಾತ್ರ ಬಿಲ್ ಎಂಟ್ರಿ ತೊಡಕಾಗುತ್ತದೆ. ಅವಳು ಕಂಪ್ಯೂಟರ್ ಎದುರು ಕುಳಿತು ನೋಟ್‌ಬುಕ್ಕಿನಲ್ಲಿ ಕಷ್ಟಪಟ್ಟು ಎಂಟ್ರಿ ಮಾಡುವುದು ಪಾಪ ಎನಿಸುತ್ತದೆ. ನಂತರ ಬರುವ ದತ್ತ ಗಣಿತ ತಜ್ಞನಂತೆ ವರ್ತಿಸುತ್ತಾನೆ. ಕೊನೆಯಲ್ಲಿ ಮೂರು ಲಕ್ಷದ ಹದಿನೈದು ಸಾವಿರ ಮೊತ್ತ ಬರೆದು ಜನಾರ್ದನನಿಗೆ ಚೆಕ್ ಮಾಡುವಂತೆ ಹೇಳುತ್ತಾನೆ. ಯಾರೊಬ್ಬರೂ ನಗದನ್ನು ಎಣಿಸುವ ಗೋಜಿಗೇ ಹೋಗುವುದಿಲ್ಲ. ಆದರೂ ಮಾಧವ ಎಂಟ್ರಿಯಿಂದಲೇ ಸವಾಲು ಗೆಲ್ಲುತ್ತಾನೆ.

—ವಾ. ಮುರಳೀಧರ, ತೀರ್ಥಹಳ್ಳಿ

## ವೀಕ್ಷಕರ ಮೆಚ್ಚುಗೆ ಅಪಬಳಕೆ

'ಶ್ರೀರಸ್ತು ಶುಭಮಸ್ತು' ಚೆನ್ನಾಗಿ ಮೂಡಿಬರುತ್ತಿದೆ. ನೋಡುಗರಿಂದ ಒಳ್ಳೆಯ ಪ್ರತಿಕ್ರಿಯೆಗಳೂ ಬರುತ್ತಿವೆ. ಜಾಹೀರಾತಿನ ಸಂದರ್ಭದಲ್ಲಿ 'ಮುಂದಿನ ಭಾಗದಲ್ಲಿ' ಅಂತ ಮುಂದಿನ ಕುತೂಹಲದ ಸಂಗತಿಯನ್ನು ಪ್ರಸಾರ ಮಾಡುತ್ತಾರೆ. ಇದರಿಂದ ಮುಂದೇನಾಗುತ್ತೆ ಅನ್ನುವುದು ಮೊದಲೇ ಗೊತ್ತಾಗಿ ಧಾರಾವಾಹಿ ನೋಡುವ ಉತ್ಸುಕತೆ ಕಡಿಮೆಯಾಗುತ್ತದೆ. ಅಂತೆಯೇ ಮುಂದಿನ ಸಂಚಿಕೆಯಲ್ಲಿ ಎಂದು ಸಾಕಷ್ಟು ದೃಶ್ಯಗಳನ್ನು ಪ್ರಸಾರ ಮಾಡುತ್ತಾರೆ. ಇಷ್ಟೆಲ್ಲ ಮಾಡುವುದರ ಜೊತೆಗೆ ಒಟ್ಟಾರೆ ದಿನದ ಧಾರಾವಾಹಿಯ ಸಮಯ ಆದಷ್ಟು ಕಡಿಮೆ ಆಗುತ್ತದೆ. ಇದು ವೀಕ್ಷಕರ ಮೆಚ್ಚುಗೆಯ ದುರುಪಯೋಗ ಎಂದೆನಿಸುತ್ತದೆ.

—ಶಾಂತ ಕುಮಾರ್, ಸರ್ಜಾಪುರ